ಕರ್ನಾಟಕ ಸರ್ಕಾರ

## ಅಧ್ಯಕ್ಷರು, ಭೂಮಾಪನ ಇಲಾಖೆ, ನೇರ ನೇಮಕಾತಿ ಸಮಿತಿ ಹಾಗೂ ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.

# ಅಧಿಸೂಚನೆ

**ಸಂಖ್ಯೆ:SSLR/EST/SM/GD-005/15-16.** ದಿನಾಂಕ: **08.09.2017.**

1. ಭಾರತ ಸಂವಿಧಾನದ ಅನುಚ್ಛೇದ 371(ಜೆ)ನ್ನು ಅನುಷ್ಠಾನಗೊಳಿಸುವ ಸಲುವಾಗಿ ಹೊರಡಿಸಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಮೀಸಲಾತಿ) ಆದೇಶ 2013 ರನ್ವಯ ರಚಿಸಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ; ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು 2013 ರಂತೆ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 149 ಭೂದಾಸ 2013 ದಿನಾಂಕ: 25.09.2014 ಹಾಗೂ ಭೂಮಾಪನ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಮೀಸಲಿರಿಸಿರುವ ಹುದ್ದೆಗಳ ಪೈಕಿ ನೇರ ನೇಮಕಾತಿಯಿಂದ ಭರ್ತಿ ಮಾಡಬೇಕಾದ ಈ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ **(ಹೈದರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ)** ವೆಬ್‌ಸೈಟ್ ವಿಳಾಸ **landrecords.karnataka.gov.in ನಲ್ಲಿ ಆನ್‌ಲೈನ್ (Online)** ಮುಖಾಂತರ ಅರ್ಜಿಯನ್ನು ಆಹ್ವಾನಿಸಲಾಗಿದೆ.

| ಹುದ್ದೆ | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ವಯೋಮಿತಿ |
|---|---|---|---|
| ಬಾಂದು ಜವಾನರು | ರೂ.9600-20012000-250-13000-300-14200-350-14550 | 151 | ಕನಿಷ್ಠ:- 18 ವರ್ಷಗಳು.<br>ಗರಿಷ್ಠ:- ಸಾಮಾನ್ಯ ವರ್ಗ - 35 ವರ್ಷಗಳು.<br>ಪ್ರವರ್ಗ-2ಎ, 2ಬಿ, 3ಎ, 3ಬಿ - 38 ವರ್ಷಗಳು.<br>ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ-1 - 40 ವರ್ಷಗಳು. |
| ಕಛೇರಿ ಜವಾನರು | ರೂ.9600-20012000-250-13000-300-14200-350-14550 | 10 | |

2. **ಅರ್ಜಿ ಸಲ್ಲಿಸಲು ಮತ್ತು ಅರ್ಜಿ ಶುಲ್ಕ ಪಾವತಿಸಲು ಕಾಲಾವಧಿ:-**

| ಕ್ರ.ಸಂ. | ವಿಷಯ | ದಿನಾಂಕ ಮತ್ತು ಸಮಯ |
|---|---|---|
| 1 | ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ | 11.09.2017 ರ ಬೆಳಗ್ಗೆ 10-00 ರಿಂದ |
| 2 | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 15.10.2017 ರ ರಾತ್ರಿ 11-30 ರವರೆಗೆ |

3. **ಶೈಕ್ಷಣಿಕ ವಿದ್ಯಾರ್ಹತೆ:-**

**ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್.30 ಎಸ್‌ಆರ್‌ಆರ್ 2013 ದಿನಾಂಕ: 06.01.2014** ರಲ್ಲಿ ಗ್ರೂಪ್ ಡಿ ಹುದ್ದೆಗೆ ನಿಗದಿಪಡಿಸಿರುವ ಎಸ್.ಎಸ್.ಎಲ್.ಸಿ. / 10ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವನ್ನಾಗಿ ಪಡೆದು ಉತ್ತೀರ್ಣರಾಗಿರಬೇಕು.

ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಸೂಚಿಸಿರುವ ಕೊನೆಯ ದಿನಾಂಕದೊಳಗೆ ಹೊಂದಿರಬೇಕು ಅಂದರೆ ಕೊನೆಯ ದಿನಾಂಕದೊಳಗೆ ಸಂಬಂಧಿಸಿದ ಪ್ರಾಧಿಕಾರದ ಫಲಿತಾಂಶ ಪ್ರಕಟಿಸಿರಬೇಕು.

4. ಹುದ್ದೆಗಳ ವರ್ಗೀಕರಣ:-

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸೇಹಿಮ 95 ದಿನಾಂಕ: 20.06.1995.

## ಬಾಂದು ಜವಾನರ ಹುದ್ದೆಗಳು

| ಮೀಸಲಾತಿ | ಇತರೆ | ಮಹಿಳಾ | ಗ್ರಾಮೀಣ | ಮಾ.ಸೈ. | ಅಂ.ವಿ. | ಕ.ಮಾ.ಅ. | ಯೋ.ನಿ.ಅ. | ಒಟ್ಟು |
|---|---|---|---|---|---|---|---|---|
| ಪ.ಜಾ. | 4 | 8 | 6 | 2 | 1* | 1 | 1 | 23 |
| ಪ.ಪಂ. | 1 | 2 | 1 | 0 | 1* | 0 | 0 | 5 |
| ಪ್ರ.ವ-1 | 1 | 2 | 2 | 0 | 1* | 0 | 0 | 6 |
| ಪ್ರ.ವ-2(ಎ) | 4 | 8 | 6 | 2 | 1* | 1 | 1 | 23 |
| ಪ್ರ.ವ-2(ಬಿ) | 1 | 2 | 2 | 0 | 1* | 0 | 0 | 6 |
| ಪ್ರ.ವ-3(ಎ) | 1 | 2 | 2 | 0 | 1* | 0 | 0 | 6 |
| ಪ್ರ.ವ-3(ಬಿ) | 2 | 2 | 2 | 0 | 1* | 0 | 0 | 7 |
| ಸಾಮಾನ್ಯ ಅಭ್ಯರ್ಥಿ | 13 | 25 | 19 | 7 | 2 *<br>1 **<br>1*** | 4 | 3 | 75 |
| **ಒಟ್ಟು** | **27** | **51** | **40** | **11** | **11** | **6** | **5** | **151** |

* ಕುರುಡ (Blind) / ದುರ್ಬಲ ದೃಷ್ಟಿ (Low Vision)

** ದುರ್ಬಲ ಶ್ರವಣ ಶಕ್ತಿ (Hearing Impairment)

*** ಚಲನ-ವಲನ ಅಂಗವೈಕಲ್ಯತೆ (Locomotor Disability)

## ಕಛೇರಿ ಜವಾನರ ಹುದ್ದೆಗಳು

| ಮೀಸಲಾತಿ | ಇತರೆ | ಮಹಿಳಾ | ಗ್ರಾಮೀಣ | ಮಾ.ಸೈ. | ಅಂ.ವಿ. | ಕ.ಮಾ.ಅ. | ಯೋ.ನಿ.ಅ. | ಒಟ್ಟು |
|---|---|---|---|---|---|---|---|---|
| ಪ.ಜಾ. | 1 | 1 | 0 | 0 | 0 | 0 | 0 | 2 |
| ಪ.ಪಂ. | 1 | 0 | 0 | 0 | 0 | 0 | 0 | 1 |
| ಪ್ರ.ವ-1 | 1 | 0 | 0 | 0 | 0 | 0 | 0 | 1 |
| ಪ್ರ.ವ-2(ಎ) | 1 | 0 | 0 | 0 | 0 | 0 | 0 | 1 |
| ಪ್ರ.ವ-2(ಬಿ) | 0 | 0 | 0 | 0 | 0 | 0 | 0 | 0 |
| ಪ್ರ.ವ-3(ಎ) | 0 | 0 | 0 | 0 | 0 | 0 | 0 | 0 |
| ಪ್ರ.ವ-3(ಬಿ) | 0 | 0 | 0 | 0 | 0 | 0 | 0 | 0 |
| ಸಾಮಾನ್ಯ ಅಭ್ಯರ್ಥಿ | 1 | 2 | 1 | 0 | 1* | 0 | 0 | 5 |
| **ಒಟ್ಟು** | **5** | **3** | **1** | **0** | **1** | **0** | **0** | **10** |

* ಕುರುಡ (Blind) / ದುರ್ಬಲ ದೃಷ್ಟಿ (Low Vision)

ಮಾ.ಸೈ. – ಮಾಜಿ ಸೈನಿಕ ಅಭ್ಯರ್ಥಿ

ಅಂ.ವಿ. – ಅಂಗವಿಕಲ ಅಭ್ಯರ್ಥಿ

ಕ.ಮಾ.ಅ. – ಕನ್ನಡ ಮಾಧ್ಯಮ ಅಭ್ಯರ್ಥಿ

ಯೋ.ನಿ.ಅ. – ಯೋಜನಾ ನಿರಾಶ್ರಿತ ಕುಟುಂಬದ ಅಭ್ಯರ್ಥಿ

6. ಆನ್ ಲೈನ್ ಅರ್ಜಿ ಸಲ್ಲಿಸುವ ಕುರಿತು ಪ್ರಮುಖ ಸೂಚನೆಗಳು:-

- ಅಭ್ಯರ್ಥಿಗಳು ಒಂದೇ ಅರ್ಜಿ ಸಲ್ಲಿಸತಕ್ಕದ್ದು. ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದಲ್ಲಿ, ಅಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆಯಿಲ್ಲದೆ ತಿರಸ್ಕರಿಸಲಾಗುವುದು.
- ಅರ್ಜಿಗಳನ್ನು ಆನ್ ಲೈನ್ (Online) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.
- ಅಭ್ಯರ್ಥಿಗಳು ಆನ್ ಲೈನ್ ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಕಡ್ಡಾಯವಾಗಿ ನೀಡಿರುವ ಸೂಚನೆಗಳನ್ನು ಓದಿಕೊಳ್ಳತಕ್ಕದ್ದು ಹಾಗೂ ನೀಡಿರುವ ಸೂಚನೆಗಳನ್ವಯ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು. ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ವಿರುದ್ಧ ಇಲಾಖೆಯು ಕಾನೂನಿನ್ವಯ ಸೂಕ್ತ ಕ್ರಮ ಕೈಗೊಳ್ಳುವುದು.
- ಅಧಿಸೂಚನೆಯಲ್ಲಿ / ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು.

| | | | |
|---|---|---|---|
| ಸಾ.ಅ. | ಸಾಮಾನ್ಯ ಅರ್ಹತೆ | GM | General Merit |
| ಪ.ಜಾ. | ಪರಿಶಿಷ್ಟ ಜಾತಿ | SC | Scheduled Caste |
| ಪ.ಪಂ. | ಪರಿಶಿಷ್ಟ ಪಂಗಡ | ST | Scheduled Tribe |
| ಪ್ರ.ವ-1 | ಪ್ರವರ್ಗ-1 | Cat-1 | Category-1 |
| ಪ್ರ.ವ-2ಎ | ಪ್ರವರ್ಗ-2ಎ | 2A | Category-2A |
| ಪ್ರ.ವ-2ಬಿ | ಪ್ರವರ್ಗ-2ಬಿ | 2B | Category-2B |
| ಪ್ರ.ವ-3ಎ | ಪ್ರವರ್ಗ-3ಎ | 3A | Category-3A |
| ಪ್ರ.ವ-3ಬಿ | ಪ್ರವರ್ಗ-3ಬಿ | 3B | Category-3B |
| ಮಾ.ಸೈ. | ಮಾಜಿ ಸೈನಿಕ | Ex-MP | Ex-Military Person |
| ಅಂ.ವಿ. | ಅಂಗವಿಕಲ | PH | Physically Handicapped Person |
| ಗ್ರಾಮೀಣ | ಗ್ರಾಮೀಣ ಅಭ್ಯರ್ಥಿ | Rural | Rural Candidate |
| ಕ.ಮಾ.ಅ. | ಕನ್ನಡ ಮಾಧ್ಯಮ ಅಭ್ಯರ್ಥಿ | KMS | Kannada Medium Student |
| ಯೋ.ನಿ.ಅ. | ಯೋಜನೆಯಿಂದ ನಿರಾಶ್ರಿತ ಅಭ್ಯರ್ಥಿ | PDP | Project Displaced Person |

7. ಅರ್ಜಿ ಶುಲ್ಕ:-

| | |
|---|---|
| ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಪ್ರವರ್ಗ-1 ಮತ್ತು ಅಂಗವಿಕಲ ಹಾಗೂ ಮಾಜಿ ಸೈನಿಕರುಗಳಿಗೆ | ರೂ.150=00 |
| ಸಾಮಾನ್ಯ ವರ್ಗ, ಪ್ರವರ್ಗ-2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ | ರೂ.300=00 |

ಅಭ್ಯರ್ಥಿಗಳು ನಾಡ ಕಛೇರಿಯ ಅಟಲ್ ಜಿ ಜನಸ್ನೇಹಿ ಕೇಂದ್ರಗಳಲ್ಲಿ ತಮ್ಮ ಚುನಾವಣಾ ಗುರುತಿನ ಚೀಟಿ ಅಥವಾ ಆಧಾರ್ ಗುರುತಿನ ಚೀಟಿ ನೀಡಿ ನಿಗದಿತ ಶುಲ್ಕವನ್ನು ಪಾವತಿಸಿ ವಿಶಿಷ್ಟ ಅರ್ಜಿ ಸಂಖ್ಯೆಯನ್ನು (Application ID) ಹೊಂದಿರುವ ಸ್ವೀಕೃತಿ ಪತ್ರ ಪಡೆಯಬೇಕು. ವಿಶಿಷ್ಟ ಅರ್ಜಿ ಸಂಖ್ಯೆ (Application ID) ಇಲ್ಲದೆ ಇದ್ದಲ್ಲಿ ಆನ್ ಲೈನ್ ಅರ್ಜಿ ತೆರೆಯುವುದಿಲ್ಲ.

ಸೂಚನೆ:- **ಶುಲ್ಕ ಪಾವತಿಸುವಾಗ ತಮ್ಮ ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ, ಜಾತಿ ಪ್ರಮಾಣ ಪತ್ರ, ಅಂಗವಿಕಲ ಪ್ರಮಾಣ ಪತ್ರ ಮತ್ತು ಮಾಜಿ ಸೈನಿಕರ ಪ್ರಮಾಣ ಪತ್ರಗಳನ್ನು (ಅನ್ವಯವಾಗುವ ಪ್ರಮಾಣ**

ಪತ್ರಗಳು) ತಪ್ಪದೆ ಹಾಜರುಪಡಿಸಬೇಕು. ಈ ಮಾಹಿತಿಗಳು ಅರ್ಜಿಯಲ್ಲಿ ದಾಖಲಾಗುವುದು. ಈ ರೀತಿ ದಾಖಲಾದ ಮಾಹಿತಿಯನ್ನು **Edit** ಮಾಡಲು ಅವಕಾಶ ಇರುವುದಿಲ್ಲ. ಆದುದರಿಂದ ತಪ್ಪು ದಾಖಲೆ / ಮಾಹಿತಿಗಳನ್ನು ನೀಡಿ ಶುಲ್ಕ ಪಾವತಿಸಿದಲ್ಲಿ ಈ ಮೊತ್ತವನ್ನು ಯಾವುದೇ ಸಂದರ್ಭದಲ್ಲಿ ಅಭ್ಯರ್ಥಿಗೆ ಹಿಂದಿರುಗಿಸುವುದಾಗಲೀ ಅಥವಾ ಬೇರೆ ಅರ್ಜಿಗೆ ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲವಾದ ಕಾರಣ, ಶುಲ್ಕ ಪಾವತಿಸುವಾಗ ಎಚ್ಚರಿಕೆಯಿಂದ ಮಾಹಿತಿ / ದಾಖಲೆಗಳನ್ನು ನೀಡಲು ಸೂಚಿಸಿದೆ. ಶುಲ್ಕ ಪಾವತಿಸಿದ ಸ್ವೀಕೃತಿ ಪತ್ರವನ್ನು ಸ್ಥಳದಲ್ಲಿಯೇ ಪರಿಶೀಲಿಸಿಕೊಳ್ಳಲು ಸಹ ಸೂಚಿಸಿದೆ.

8. <u>ಅರ್ಜಿಯನ್ನು ಆನ್ ಲೈನ್ ಮುಖೇನ ಸಲ್ಲಿಸುವ ವಿಧಾನ</u>:-

<u>ಹಂತ 1:-</u> ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು **landrecords.karnataka.gov.in** ವೆಬ್ ಸೈಟ್ ವಿಳಾಸವನ್ನು ತೆರೆದು H-K Peon Selection – 2017 ಎಂಬ ಲಿಂಕ್ ನ್ನು ಕ್ಲಿಕ್ ಮಾಡಿದಾಗ, ಅಧಿಸೂಚನೆ (Notification) ಮತ್ತು Online Application ಗಳು ಮೂಡುತ್ತದೆ. ಅಧಿಸೂಚನೆಯನ್ನು ಡೌನ್ ಲೋಡ್ ಮಾಡಿಕೊಳ್ಳಲು ಅವಕಾಶವಿರುತ್ತದೆ. ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಧಿಸೂಚನೆಯನ್ನು ಓದಿ ಅರ್ಥೈಸಿಕೊಳ್ಳತಕ್ಕದ್ದು.

<u>ಹಂತ 2:-</u> ಅರ್ಜಿ ಸಲ್ಲಿಸುವ ಮುನ್ನ ಅಭ್ಯರ್ಥಿಗಳು ನಾಡ ಕಛೇರಿಯ ಅಟಲ್ ಜಿ ಜನಸ್ನೇಹಿ ಕೇಂದ್ರಗಳಲ್ಲಿ ಚುನಾವಣಾ ಗುರುತಿನ ಚೀಟಿ ಅಥವಾ ಆಧಾರ್ ಗುರುತಿನ ಚೀಟಿ ನೀಡಿ ಶುಲ್ಕವನ್ನು ಪಾವತಿಸಿ ವಿಶಿಷ್ಟ ಅರ್ಜಿ ಸಂಖ್ಯೆಯನ್ನು (Application ID) ಹೊಂದಿರುವ ಸ್ವೀಕೃತಿ ಪತ್ರ ಪಡೆಯಬೇಕು.

<u>ಹಂತ 3:-</u> ಶುಲ್ಕ ಪಾವತಿಸಿದ ಸ್ವೀಕೃತಿ ಪತ್ರದಲ್ಲಿನ ವಿಶಿಷ್ಟ ಅರ್ಜಿ ಸಂಖ್ಯೆ (Application ID) ಯನ್ನು ಆನ್ ಲೈನ್ ಅರ್ಜಿಯ USER ID ಅಂಕಣದಲ್ಲಿ ಭರ್ತಿ ಮಾಡಿ ಶುಲ್ಕ ಪಾವತಿಸುವ ಸಂದರ್ಭದಲ್ಲಿ ಹಾಜರುಪಡಿಸುವ ಚುನಾವಣಾ ಗುರುತಿನ ಚೀಟಿ ಅಥವಾ ಆಧಾರ್ ಗುರುತಿನ ಚೀಟಿಯ ಸಂಖ್ಯೆಯನ್ನು PASSWORD ಅಂಕಣದಲ್ಲಿ ಭರ್ತಿ ಮಾಡಬೇಕು. ನಂತರ Submit ಬಟನ್ ಒತ್ತಿದರೆ ಆನ್ ಲೈನ್ ಅರ್ಜಿ ಪ್ರದರ್ಶಿತವಾಗುತ್ತದೆ.

<u>ಹಂತ 4:-</u> ಆನ್ ಲೈನ್ ಅರ್ಜಿ ಸಲ್ಲಿಸುವ ಮೊದಲು ಅಭ್ಯರ್ಥಿಯ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಲು (size 10 to 50 KB) ಸಿದ್ಧತೆ ಮಾಡಿಕೊಳ್ಳಬೇಕು. ಅರ್ಜಿ ತೆರೆಯುವ ಮೊದಲು ಭಾವಚಿತ್ರದ ಸ್ಕ್ಯಾನಿಂಗ್ ಕಾರ್ಯ ಪೂರ್ಣಗೊಳಿಸಬೇಕು ಮತ್ತು ಅದರ ಸೈಜ್‌ನ್ನು ಕಡ್ಡಾಯವಾಗಿ ಖಾತರಿಪಡಿಸಿಕೊಳ್ಳಬೇಕು.

<u>ಹಂತ 5:-</u> ಆನ್ ಲೈನ್ ಅರ್ಜಿಯು ಎರಡು ಪುಟವಿದ್ದು ಮೊದಲನೆಯ ಪುಟವನ್ನು ಭರ್ತಿ ಮಾಡಿದ ನಂತರ Next ಬಟನ್ ಒತ್ತಿದರೆ ಎರಡನೆಯ ಪುಟ ಪ್ರದರ್ಶಿತವಾಗುತ್ತದೆ. ಎರಡನೆಯ ಪುಟವನ್ನು ಭರ್ತಿ ಮಾಡಿದ ನಂತರ Proceed ಬಟನ್ ಒತ್ತಿದರೆ ಭರ್ತಿಯಾದ ಸಂಪೂರ್ಣ ಅರ್ಜಿ ಪ್ರದರ್ಶಿತವಾಗುತ್ತದೆ. ಯಾವುದೇ ತಿದ್ದುಪಡಿ ಇದ್ದಲ್ಲಿ EDIT ಬಟನ್ ಒತ್ತಿ ಸಂಬಂಧಿಸಿದ ಅಂಕಣಗಳಲ್ಲಿ ಮಾಹಿತಿಯನ್ನು ಸರಿಪಡಿಸಿದ ನಂತರ Proceed ಬಟನ್ ಒತ್ತಿದರೆ ಪ್ರದರ್ಶಿತವಾಗುವ ಅರ್ಜಿಯಲ್ಲಿನ ಎಲ್ಲಾ ಮಾಹಿತಿಯನ್ನು ಸರಿ ಇದೆ ಎಂದು ಖಾತರಿಪಡಿಸಿಕೊಂಡು, ಅಂತಿಮವಾಗಿ ಇರುವ ಘೋಷಣೆ (DECLARATION) ಯನ್ನು ಕಡ್ಡಾಯವಾಗಿ ಓದಿಕೊಂಡು ☐ ಚೌಕದಲ್ಲಿ ಕ್ಲಿಕ್ ಮಾಡಿದಾಗ ☑ ಎಂದು ಮೂಡುತ್ತದೆ. ಈ ರೀತಿ ಚೌಕದಲ್ಲಿ ಕ್ಲಿಕ್ ಮಾಡಿದಾಗ ಅರ್ಜಿಯಲ್ಲಿ ಭರ್ತಿ ಮಾಡಿರುವ ಎಲ್ಲಾ ಮಾಹಿತಿಗಳು ಸರಿ ಇದೆ ಎಂದು ಒಪ್ಪಿ ದೃಡೀಕರಿಸಿದಂತೆ ಎಂದು ಭಾವಿಸಲಾಗುತ್ತದೆ. ಅಲ್ಲದೆ ಅರ್ಜಿ ಸಲ್ಲಿಸಲು ಅಗತ್ಯವಿರುವ ಹೈಡ್ ಆಗಿದ್ದ Submit ಬಟನ್ ತೆರೆಯುತ್ತದೆ. Submit ಬಟನ್ ಒತ್ತಿದಾಗ ಆನ್ ಲೈನ್ ಅರ್ಜಿ ಸಲ್ಲಿಸುವ ಕ್ರಮ ಪೂರ್ಣಗೊಂಡಂತೆ. ಒಮ್ಮೆ Submit ಬಟನ್ ಒತ್ತಿದ ನಂತರ ಅರ್ಜಿಯಲ್ಲಿನ ಯಾವುದೇ ಮಾಹಿತಿಯನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಆದುದರಿಂದ <u>**Submit** ಬಟನ್ ಒತ್ತುವ ಮೊದಲು, ಅರ್ಜಿಯಲ್ಲಿ ಭರ್ತಿ ಮಾಡಿರುವ ಎಲ್ಲಾ ಮಾಹಿತಿಯನ್ನು ಖಾತರಿಪಡಿಸಿಕೊಂಡು, ನಂತರ **Submit** ಬಟನ್ ಒತ್ತಬೇಕು.</u>